## ಹೊರಗೆ ತಿನ್ನಲ್ಲ

ಹೋಟೆಲ್ ಮಾಲೀಕ ರಮೇಶನನ್ನು, 'ಏನ್ ಸರ್, ದಿನಾಲೂ ಎರಡೂ ಹೊತ್ತಿನ ಊಟವನ್ನು ಪಾರ್ಸಲ್ ತೆಗೆದುಕೊಂಡು ಹೋಗ್ತೀರಲ್ಲ, ಇಲ್ಲಿಯೇ ಊಟ ಮುಗಿಸಿ ಹೋಗಬಾರದೆ?' ಎಂದು ಪ್ರಶ್ನಿಸಿದ. ರಮೇಶ ಉತ್ತರಿಸಿದ, 'ಇಲ್ಲ ಸರ್, ಹೊರಗಡೆ ಏನೂ ತಿನ್ನಬೇಡಿ ಅಂತ ವೈದ್ಯರು ಕಟ್ಟುನಿಟ್ಟಾಗಿ ಹೇಳಿದ್ದಾರೆ. ಅದಕ್ಕೇ ಪಾರ್ಸಲ್ ತೆಗೆದುಕೊಂಡು ಹೋಗ್ತೇನೆ' ಎಂದು ಮುಗ್ಧವಾಗಿ ಹೇಳಿದ. ಮಾಲೀಕನ ಕೈ ತಲೆಯ ಮೇಲೆ ಹೋಯಿತು!

**ಶೋಭಾ ಪ್ರಮೋದ್**





## ಎಣ್ಣೆ ಹಾಕ್ಕೊಂಡು ಸ್ನಾನ

ಅಂದು ದೀಪಾವಳಿ ಹಬ್ಬ. ಭಾನುವಾರ ಬೇರೆ. ರಾತ್ರಿ ಹನ್ನೊಂದು ಗಂಟೆಗೆ ಮನೆ ಸೇರಿ ಮಲಗಿದ್ದ ಗುಂಡ ನಿಧಾನಕ್ಕೆ ಎದ್ದರಾಯಿತು ಎಂದು ಹಾಸಿಗೆಯಲ್ಲಿಯೇ ಹೊರಳಾಡುತ್ತಿದ್ದ. ಹೆಂಡತಿ ಸ್ನಾನ ಮುಗಿಸಿ ಒಳಗೆ ಬರುತ್ತ, 'ಅಯ್ಯೋ... ಏನ್ರೀ ಇನ್ನೂ ಮಲಗಿದ್ದೀರಾ? ಇವತ್ತು ಹಬ್ಬ, ಎಣ್ಣೆ ಹಾಕ್ಕೊಂಡು ಸ್ನಾನ ಮಾಡಬೇಕು, ನೆನಪಿಲ್ವಾ... ಏಳ್ರಿ ಬೇಗ' ಅಂದಳು. ಗುಂಡ ಆಕಳಿಸುತ್ತ, 'ಸುಮ್ನಿರೆ, ಇಷ್ಟು ಬೇಗ ಯಾವ ಬಾರ್ ತೆರೆದಿರುತ್ತೆ...' ಎಂದ.

**ಎಂ.ಕೆ. ಮಂಜುನಾಥ್**

ಕಲೆ: ಗಣೇಶ ಆಚಾರ್ಯ